## ಜಪಾನ್‌ನಲ್ಲಿ ಪ್ರಾಯೋಜಕತ್ವ

ವೈದ್ಯಕೀಯ ಮತ್ತು ಜೀವನಶೈಲಿಯ ಕಾರಣದ ಹೊರತಾಗಿ ಇತ್ತೀಚೆಗೆ ಮುಖ್ಯವಾದ ಕಾರಣವೊಂದಕ್ಕೆ ಅಂಡಾಣುಗಳನ್ನು ಶೇಖರಿಸಿಡಲಾಗುತ್ತಿದೆ. ಅನೇಕ ಕಾರಣಗಳಿಂದ ಕೆಲವು ದೇಶಗಳಲ್ಲಿ ಜನನ ಪ್ರಮಾಣ ದರ ಕುಸಿದಿದ್ದು, ವಯಸ್ಕರ ಸಂಖ್ಯೆ ಹೆಚ್ಚುತ್ತಿದೆ. ಪ್ರಕೃತಿ ವಿಕೋಪಗಳಲ್ಲಿ ಸಾಯುವವರ ಸಂಖ್ಯೆಯೂ ಹೆಚ್ಚುತ್ತಿದೆ. ಇದೇ ಕಾರಣಕ್ಕಾಗಿ ಜಪಾನ್‌ನ ಉರಾಯಾಸು ನಗರದಲ್ಲಿ ವಿಶ್ವವಿದ್ಯಾಲಯವೊಂದು ಅಂಡಾಣು ಶೇಖರಣೆಗೆ ಪ್ರಾಯೋಜಕತ್ವ ನೀಡಿತ್ತು. ಅಲ್ಲಿನ ಮಹಿಳೆಯರನ್ನು ಅಂಡಾಣು ಶೇಖರಿಸುವಂತೆ ಜಾಗೃತಿ ಮೂಡಿಸಿತ್ತು. 2016ರಲ್ಲಿ ಈ ನಗರದ 25ರಿಂದ 34 ವರ್ಷದ ಮಹಿಳೆಯರಿಗಾಗಿ ಈ ಯೋಜನೆಗೆ 90 ಮಿಲಿಯನ್ ಯೆನ್‌ಗಳನ್ನು (ಸುಮಾರು ಆರು ಕೋಟಿ ರೂಪಾಯಿ) ಮೀಸಲಿರಿಸಲಾಗಿತ್ತು. ಜನನ ಪ್ರಮಾಣವನ್ನು ಹೆಚ್ಚಿಸಿ ದೇಶದ ಜನಸಂಖ್ಯೆಯನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲು ಕೂಡ ಈ ಯೋಜನೆಯನ್ನು ಮುಂದಿನ ದಿನಗಳಲ್ಲಿ ಮುಂದುವರಿದ ರಾಷ್ಟ್ರಗಳು ಹೆಚ್ಚಾಗಿ ಬಳಸಬಹುದು.

ಸಾಮಾನ್ಯ ಸ್ತ್ರೀಗೆ ಇದು ದುಬಾರಿ. 'ಐವಿಎಫ್'ನಲ್ಲಿ ಹೇಗೆ ಒಂದು ಬಾರಿ ಯಶಸ್ವಿಯಾಗದಿದ್ದರೆ ಎರಡನೇ ಬಾರಿ, ಮೂರನೇ ಬಾರಿ, ನಾಲ್ಕನೇ ಬಾರಿ ಹೀಗೆ ಮುಂದುವರೆಯುತ್ತದೆಯೋ ಇದು ಕೂಡ ಹಾಗೆ. ಇದರ ಜೊತೆಗೆ ಪ್ರಯೋಗಾಲಯದಲ್ಲಿ ಅಥವಾ ಬ್ಯಾಂಕ್‌ನಲ್ಲಿ ಸಂಗ್ರಹಿಸಿಡುವ ನಿರ್ವಹಣೆ ವೆಚ್ಚವನ್ನೂ ಭರಿಸಬೇಕಾಗುತ್ತದೆ. ಇದು ವರ್ಷಕ್ಕೆ ಇಂತಿಷ್ಟು ಎಂಬ ರೀತಿಯಲ್ಲಿ ಲೆಕ್ಕ ಹಾಕಲಾಗುತ್ತದೆ. ಘನೀಕರಿಸಲಾದ ಅಂಡಾಣುಗಳಲ್ಲಿ ಶೇ. 95 ಮುಂದಿನ ಚಿಕಿತ್ಸೆಗೆ ಬಳಸಲು ಬರುತ್ತವೆ. ಉಳಿದವು ಯಾವುದೇ ಉಪಯೋಗಕ್ಕೆ ಬರುವುದಿಲ್ಲ. ಇನ್ನು ಇದರಿಂದ ಗರ್ಭಧರಿಸುವ ಪ್ರಮಾಣ ಶೇ. 68.75 ಇರುತ್ತದೆ. 2021ರ ವರದಿಯಂತೆ ಅಂಡಾಣು ಸಂಗ್ರಹಣೆಯಲ್ಲಿ ಮುಂಬೈ ನಗರ ಮುಂಚೂಣಿಯಲ್ಲಿದೆ. ಕಾರಣ, ಬಾಲಿವುಡ್ ಮತ್ತು ಮೇಲ್ವರ್ಗದ ಹೆಣ್ಣುಮಕ್ಕಳಿಗೆ ಇದರ ಕುರಿತಾಗಿ ಇರುವ ಜಾಗೃತಿ. ಇತ್ತೀಚೆಗೆ ಭಾರತದಲ್ಲಿ ಈ ಟ್ರೆಂಡ್ ಜಾಸ್ತಿಯಾಗುತ್ತಿದೆ ಎಂದು ಆ ಕ್ಷೇತ್ರದಲ್ಲಿನ ತಜ್ಞರು ಅಭಿಪ್ರಾಯಪಡುತ್ತಾರೆ.

### ಕಂಪನಿಗಳ ಬೆಂಬಲ

2014ರಲ್ಲಿ ಅಮೆರಿಕದ ಕಂಪನಿಗಳಾದ 'ಆ್ಯಪಲ್' ಮತ್ತು 'ಫೇಸ್‌ಬುಕ್' ತಮ್ಮ ಮಹಿಳಾ ಉದ್ಯೋಗಿಗಳಿಗೆ ಅಂಡಾಣು ಸಂರಕ್ಷಣೆಗೆ ಪ್ರಾಯೋಜಕತ್ವ ನೀಡಿದವು. 'ಆ್ಯಪಲ್' ಕಂಪನಿ ಅಂಡಾಣು ಶೇಖರಣೆಗೆ ಒಳಗಾಗುವ ಮಹಿಳೆಯ ಪ್ರತಿ ಸುತ್ತು ಮತ್ತು ಆ ನಂತರ ಸಂಗ್ರಹಣೆ ನಿರ್ವಹಣಾ ವೆಚ್ಚಕ್ಕಾಗಿ 20,000 ಡಾಲರ್ (ಸುಮಾರು ₹14,89,000) ನೀಡುವುದಾಗಿ ಘೋಷಿಸಿತ್ತು. 'ಫೇಸ್‌ಬುಕ್' ತನ್ನ ಕಂಪನಿಯ ಮಹಿಳಾ ಉದ್ಯೋಗಿಗಳಿಗೆ ವೈದ್ಯಕೀಯೇತರ ಅಂದರೆ ಜೀವನಶೈಲಿ ಕಾರಣಕ್ಕೆ ಅಂಡಾಣು ಸಂರಕ್ಷಣೆಯನ್ನು ಕಂಪನಿ ನೀಡುವ ವೈದ್ಯಕೀಯ ಸೌಲಭ್ಯದಲ್ಲಿ ಸೇರಿಸಿದ್ದೇವೆ ಎಂದು ಹೇಳಿದೆ. ಆ ನಂತರ ಕಾರ್ಪೊರೇಟ್ ವಲಯದ ಸುಮಾರು ಕಂಪನಿಗಳಿಗೆ ಈ ಟ್ರೆಂಡ್ ಹಬ್ಬಿದೆ. ಹೆಣ್ಣಿನ ವೃತ್ತಿಪರತೆಯನ್ನು ತಾವು ಗೌರವಿಸುತ್ತೇವೆ, ಖಾಸಗಿ ಜೀವನವನ್ನು ಕಾಳಜಿ ಮಾಡುತ್ತೇವೆ, ಕೆಲಸದ ಸ್ಥಳದಲ್ಲಿ ಸ್ತ್ರೀ ಸಮಾನತೆ, ಸ್ತ್ರೀ ಸಬಲೀಕರಣವನ್ನು ಕಾಪಾಡುತ್ತೇವೆ ಎಂದು ತಿಳಿಸಲು ಇಂದು ಜಗತ್ತಿನ ಅತಿದೊಡ್ಡ ಕಂಪನಿಗಳು ಈ ತರಹದ್ದೊಂದು ಅನುಕೂಲವನ್ನು ವೈದ್ಯಕೀಯ ಸೌಲಭ್ಯದಲ್ಲಿ ಅಳವಡಿಸಿದ್ದಾರೆ. ಅಕ್ಸೆಂಚರ್, ವೀ ವರ್ಕ್, ಇನ್ಫೋಸಿಸ್, ಇಂಡಿಜಿನ್ ಕೂಡ ಈಗ ಈ ಸಾಲಿನಲ್ಲಿ ಸೇರಿವೆ. ಕೆಲವು ಕಂಪನಿಗಳು ಮಕ್ಕಳನ್ನು ಪಡೆಯಲು ತೆಗೆದುಕೊಳ್ಳುವ ಎಲ್ಲಾ ರೀತಿಯ ಚಿಕಿತ್ಸೆಗಳಿಗೆ ಸಾಲವನ್ನೂ ನೀಡುತ್ತಿವೆ.

### ಅಂದುಕೊಂಡಷ್ಟು ಸುಲಭವೂ ಅಲ್ಲ

ಸಂಗ್ರಹಿಸಿಟ್ಟ ಘನೀಕರಿಸಿದ ಅಂಡಾಣುಗಳು ನೂರಕ್ಕೂ ನೂರರಷ್ಟು ಫಲ ಕೊಡದಿರುವ ಕಾರಣ ಕೂಡ ಅಂಡಾಣು ಘನೀಕರಿಸುವ ವಿಧಾನದಿಂದ ಅನೇಕರನ್ನು ಹಿಂದೆ ಸರಿಸುವಂತೆ ಮಾಡುತ್ತದೆ. 'ಐವಿಎಫ್'ನಲ್ಲಿ ತಾಜಾ ಅಂಡಾಣುವನ್ನು ಪಡೆದು ಭ್ರೂಣ ತಯಾರಿಕೆಗೆ ಮುಂದಾಗುವುದೇ ಹೆಚ್ಚು. ವಿಶ್ವಾಸಾರ್ಹತೆ ಕಾರಣದಿಂದಾಗಿಯೂ ಅಂಡಾಣು ದಾನವಾಗಿ ಪಡೆಯುವಾಗ ಘನೀಕರಿಸಿಟ್ಟ ಅಂಡಾಣು ಪಡೆಯಲು ಸಂಗಾತಿಗಳು ಮುಂದಾಗುವುದು ಕಡಿಮೆ. ದಂಪತಿಗಳು ತಮ್ಮ ಅಂಡಾಣು ಮತ್ತು ವೀರ್ಯಾಣುವಿನಿಂದ ಬಾಡಿಗೆ ತಾಯಿಯಿಂದ ಮಗುವನ್ನು ಪಡೆಯಬೇಕು ಎಂದಾಗ, ಮತ್ತು ಬೇರೆ ಹೆಣ್ಣಿನ ಅಂಡಾಣುವನ್ನು ಪಡೆಯುವಾಗ ಅಂಡಾಣು ನೀಡುವ ಮತ್ತು ಬಾಡಿಗೆ ತಾಯಿಗಿರಬೇಕಾದ ಅರ್ಹತೆಗಳ ಮೇಲೆ ದರ ನಿಗದಿಯಾಗುವುದು ಈ ವಿಷಯದಲ್ಲಿ ಇನ್ನೊಂದು ಅಚ್ಚರಿಯ ಸಂಗತಿ. ಬಾಡಿಗೆ ತಾಯಿಯಾಗುವವಳು ಮತ್ತು ಅಂಡಾಣು ದಾನ ಮಾಡಲು ತಯಾರಿರುವ ಸ್ತ್ರೀ ಹುಟ್ಟಿ ಬೆಳೆದ ಪರಿಸರ, ಆಕೆಯ ಬಣ್ಣ, ಎತ್ತರ, ವಯಸ್ಸು, ವಿದ್ಯಾರ್ಹತೆ, ಹವ್ಯಾಸಗಳು, ಆಕೆಯ ಕೌಶಲ್ಯ, ಜೀವನ ಶೈಲಿ, ಸಂವಹನದ ರೀತಿ ಇವೆಲ್ಲವನ್ನು ಅಳೆದು ತೂಗಿ ದಂಪತಿಗಳು ಆಕೆಯನ್ನು ಆಯ್ಕೆ ಮಾಡುತ್ತಾರೆ.



ಈಗ ಅಂಡಾಣುಗಳನ್ನು ದಾನ ಮಾಡುವವರಿಗಾಗಿಯೇ ಬೇರೆ ಬೇರೆ ದೇಶಗಳಲ್ಲಿ ಆ್ಯಪ್‌ಗಳು ಕೂಡ ಇವೆ. ಅಂಡಾಣುಗಳನ್ನು ದಾನ ಮಾಡಲು ಆಸ್ಪತ್ರೆಗಳು ನೀಡುವ ಅಪ್ಲಿಕೇಷನ್‌ಗಳಲ್ಲಿ ಮುಖ್ಯವಾಗಿ ಕೇಳುವುದೇ ಫೋಟೊ, ವಯಸ್ಸು, ಎತ್ತರ ಮತ್ತು ಬಣ್ಣ. ಆ ನಂತರ ಅವಳ ಆರೋಗ್ಯ ತಪಾಸಣೆ ಪ್ರಕ್ರಿಯೆ, ಸಂದರ್ಶನ ಎಲ್ಲವೂ ನಡೆಯುತ್ತದೆ. ಇಂತಹ ಪ್ರೊಫೈಲ್‌ಗಳನ್ನು ಹೆಚ್ಚಾಗಿ ಐವಿಎಫ್ ಚಿಕಿತ್ಸೆಗೆ ಬಳಸಲಾಗುತ್ತದೆ. ಬೆಂಗಳೂರಿನಲ್ಲೊಂದೇ ಹೀಗೆ ಅಂಡಾಣುವನ್ನು ಭ್ರೂಣ ತಯಾರಿಸಲು ಬಳಸುವ 850ಕ್ಕೂ ಹೆಚ್ಚು ವೈದ್ಯರಿದ್ದಾರೆ ಅಂದರೆ ಅದು ಎಷ್ಟು ಜನಪ್ರಿಯವಾಗಿರಬಹುದು ಎಂದು ಊಹಿಸಿಕೊಳ್ಳಿ.

### ಕರಾಳ ಮುಖವೂ ಇದೆ

ಅಂಡಾಣು ಸಂಗ್ರಹಕ್ಕಾಗಿ ನಡೆಯುವ ವೈದ್ಯಕೀಯ ಚಿಕಿತ್ಸೆಯಿಂದ ಆರೋಗ್ಯದ ಮೇಲೆ ಸಣ್ಣ ಪುಟ್ಟ ಅಡ್ಡ ಪರಿಣಾಮಗಳಾಗುತ್ತವೆ ಎಂಬ ವಾದವಿದೆ. ಇದು ಕ್ಷುಲ್ಲಕ ಎನಿಸಿದರೂ ಕಡೆಗಣಿಸುವಂತಿಲ್ಲ. ಏಕೆಂದರೆ 'ಐವಿಎಫ್' ಚಿಕಿತ್ಸೆ ಭಾರತದಲ್ಲಿ ಹೆಚ್ಚಾಗಿರುವುದರಿಂದ ಅಂಡಾಣುಗಳ ಕಳ್ಳಸಾಗಣೆ ಜಾಲಗಳು ಕೂಡ ಬೃಹತ್ ಪ್ರಮಾಣದಲ್ಲಿ ಹುಟ್ಟಿಕೊಂಡಿವೆ. ಇದು ದೊಡ್ಡ ವ್ಯವಹಾರವಾಗಿ ಮಾರ್ಪಟ್ಟಿರುವುದರಿಂದ ಭ್ರೂಣಗಳ ಅಂತರಾಷ್ಟ್ರೀಯ ಕಳ್ಳ ಸಾಗಾಣಿಕೆ ಹೆಚ್ಚಿದೆ. ಭಾರತದಲ್ಲಿ ಇಂತಹ ಹಲವಾರು ಪ್ರಕರಣಗಳು ದಾಖಲಾಗಿವೆ. ಹೆಣ್ಣುಮಕ್ಕಳನ್ನು ಅಪಹರಿಸಿ ಒತ್ತಾಯಪೂರ್ವಕವಾಗಿ ಅಂಡಾಣು ಪಡೆಯುವ ಮತ್ತು ಅವರ ಆರ್ಥಿಕ ಸಂಕಷ್ಟದ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳುವವರು ಒಂದೆಡೆಯಾದರೆ,ಇಚ್ಛಾಪೂರ್ವಕವಾಗಿ ದಾನ ಮಾಡಲು ತಯಾರಾಗಿರುವ ಮಹಿಳೆಯರ